

**ಶ್ರೀ ನರೇಂದ್ರ ಮೋದಿ**
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ

**ನವ ಭಾರತಕ್ಕಾಗಿ**
**ನವ ಕರ್ನಾಟಕ**







**ಶ್ರೀ ಥಾವರ್ ಚಂದ್ ಗೆಹ್ಲೋಟ್**
ಸನ್ಮಾನ್ಯ ರಾಜ್ಯಪಾಲರು



**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

# 73ನೇ ಗಣರಾಜ್ಯೋತ್ಸವದ ಶುಭಾಶಯಗಳು

## ಪ್ರತಿ ಭಾರತೀಯನ ಮನದಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಬಿತ್ತಿದಂತಹ ದಿನ.

ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದ ಸಮಿತಿ ಸಿದ್ಧಪಡಿಸಿದ ನಮ್ಮ ಸಂವಿಧಾನ ಜನವರಿ 26, 1950 ರಂದು ಜಾರಿಗೆ ಬಂದಿತು. ನಮ್ಮ ಸಂವಿಧಾನದ ಮೇಲಿನ ನಮ್ಮ ವಿಶ್ವಾಸವನ್ನು ಮರುದೃಢಪಡಿಸುವ ಮೂಲಕ, ಹಾಗೂ ಸಂವಿಧಾನದ ಸಮಗ್ರತೆಯನ್ನು ಎತ್ತಿಹಿಡಿಯುವ ಮೂಲಕ ಈ ಗಣರಾಜ್ಯೋತ್ಸವ ದಿನವನ್ನು ಆಚರಿಸೋಣ.

## ನವದೆಹಲಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕದ ಸ್ತಬ್ಧಚಿತ್ರ



ರಾಜ್ಯದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಈ ಬಾರಿಯೂ ಗಣರಾಜ್ಯೋತ್ಸವದಲ್ಲಿ ಭಾಗವಹಿಸುತ್ತಿದ್ದು ಇದು 50ನೇ ಬಾರಿಯಾಗಿದೆ.

ಕರ್ನಾಟಕದ ಸ್ತಬ್ಧಚಿತ್ರ 'ಕರ್ನಾಟಕ, ಪಾರಂಪರಿಕ ಕರಕುಶಲವಸ್ತುಗಳ ತೊಟ್ಟಿಲು' ಎಂಬ ವಿಷಯವನ್ನು ಆಧರಿಸಿದೆ. ಈ ಬಾರಿಯ ಪಥಸಂಚಲನದಲ್ಲಿ ಕರ್ನಾಟಕದ ಈ ಸ್ತಬ್ಧಚಿತ್ರ ಭಾಗವಹಿಸುತ್ತಿದ್ದು ನಮ್ಮ ರಾಜ್ಯದ ಸ್ತಬ್ಧಚಿತ್ರಗಳು ಸತತವಾಗಿ 13ನೇ ಬಾರಿಗೆ ಆಯ್ಕೆಯಾದಂತಾಗಿದೆ. ಆಯ್ಕೆಯಾಗಿರುವ ಒಟ್ಟು 12 ರಾಜ್ಯಗಳ ಪೈಕಿ ಕರ್ನಾಟಕ ದಕ್ಷಿಣ ಭಾರತದ ಏಕೈಕ ರಾಜ್ಯವಾಗಿದೆ.

ಈ ಬಾರಿಯ ಗಣರಾಜ್ಯೋತ್ಸವವನ್ನು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸಾರುವಂತಹ ಆಚರಣೆಯನ್ನಾಗಿ ಮಾಡಲು ಕರ್ನಾಟಕ ಸರ್ಕಾರ 'ಗ್ರಾಮ ಒನ್' ಸೇವೆಯನ್ನು ಆರಂಭಿಸುತ್ತಿದೆ. ಈ ಸೇವೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಎಲ್ಲಾ ಪ್ರಮುಖ ಇಲಾಖೆಗಳ ಸೇವೆಗಳನ್ನು ಜನರಿಗೆ ಮಧ್ಯವರ್ತಿಗಳಿಲ್ಲದೆ ತಲುಪಿಸಲಾಗುತ್ತದೆ.

# ಕರ್ನಾಟಕದಲ್ಲಿ ಸರ್ಕಾರಿ ಸೇವೆಗಳಲ್ಲಿ ಮಹತ್ತರ ಕ್ರಾಂತಿ.

## ಗ್ರಾಮ ಒನ್ ಸೇವೆಗೆ ಚಾಲನೆ

ಮೊದಲ ಹಂತದಲ್ಲಿ 12 ಜಿಲ್ಲೆಗಳಲ್ಲಿ

ಗ್ರಾಮ ಒನ್

## ಗ್ರಾಮ ಮಟ್ಟದಲ್ಲಿ ಎಲ್ಲಾ ನಾಗರಿಕ ಕೇಂದ್ರಿತ ಚಟುವಟಿಕೆಗಳ ಏಕಗವಾಕ್ಷಿ ನೆರವಿನ ಕೇಂದ್ರ

- ಮೊದಲ ಹಂತದಲ್ಲಿ **ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಉಡುಪಿ ಹಾಗೂ ಕೊಡಗು,** ಈ 12 ಜಿಲ್ಲೆಗಳಲ್ಲಿ 'ಗ್ರಾಮ ಒನ್' ಸೇವೆಗೆ ಚಾಲನೆ ನೀಡಲಾಗುತ್ತಿದೆ.
- ಈ ಉದ್ದೇಶಕ್ಕಾಗಿ **3,000 'ಗ್ರಾಮ ಒನ್' ಸೇವಾ ಕೇಂದ್ರಗಳನ್ನು** ತೆರೆಯಲಾಗುತ್ತಿದೆ. ಈ ಕೇಂದ್ರಗಳು 'ಬೆಂಗಳೂರು ಒನ್' ಹಾಗೂ 'ಕರ್ನಾಟಕ ಒನ್' ಕೇಂದ್ರಗಳಂತೆಯೇ ಇರುತ್ತವೆ.
- 'ಗ್ರಾಮ ಒನ್' ಕೇಂದ್ರ ಗ್ರಾಮಸ್ಥರ ಅನುಕೂಲಕ್ಕಾಗಿ **ಬೆಳಿಗ್ಗೆ 8 ರಿಂದ ರಾತ್ರಿ 8** ಗಂಟೆಯವರೆಗೆ ತೆರೆದಿರುತ್ತದೆ.





## ಜನರಿಂದ, ಜನರಿಗೋಸ್ಕರ, ಜನ ಕಲ್ಯಾಣಕ್ಕಾಗಿ, ಜನರ ಬಳಿಗೆ ಆಡಳಿತ – ಅದುವೇ ಗ್ರಾಮ ಒನ್



- ಇನ್ನು ಮುಂದೆ ಗ್ರಾಮಸ್ಥರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳ ಸರ್ಕಾರಿ ಕಚೇರಿಗಳಿಗೆ ಓಡಾಡುವ ಅವಶ್ಯಕತೆ ಇರುವುದಿಲ್ಲ. ಸರ್ಕಾರಿ ಸೇವೆಗಳನ್ನು 'ಗ್ರಾಮ ಒನ್' ಕೇಂದ್ರಗಳಲ್ಲಿಯೇ ಪಡೆದುಕೊಳ್ಳಬಹುದು.

**'ಗ್ರಾಮ ಒನ್' ಕಾರ್ಯಕ್ರಮದಡಿ ಒದಗಿಸುವ ಸೇವೆಗಳು**

- ಸೇವಾ ಸಿಂಧು ಕಾರ್ಯಕ್ರಮದ ಎಲ್ಲಾ 750+ ಸೇವೆಗಳನ್ನು 'ಗ್ರಾಮ ಒನ್' ಕೇಂದ್ರಗಳ ಮೂಲಕ ಒದಗಿಸಲಾಗುವುದು.
- ಸಕಾಲ ಸೇವೆಗಳು, ಆರ್‌ಟಿಐ ಸೇವೆಗಳು, ಸಿಎಂಆರ್‌ಎಫ್ ಸೇವೆಗಳು ಹಾಗೂ ಮೈಕ್ರೊ ಬ್ಯಾಂಕಿಂಗ್ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ಆಧಾರ್ ತಿದ್ದುಪಡಿ, ಇತ್ಯಾದಿ.

## ರಾಜ್ಯದ ಒಟ್ಟಾರೆ ಅಭಿವೃದ್ಧಿಗಾಗಿ ಅಮೃತ ಯೋಜನೆ

75ನೇ ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 2021) ಸಂದರ್ಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಅಮೃತ ವಿಶೇಷ ಯೋಜನೆಗಳಿಗೆ ಚಾಲನೆ ನೀಡಿದರು. ಮೂಲಭೂತ ಸೌಕರ್ಯ, ಕ್ರೀಡೆಗಳು, ಕೃಷಿ, ಸಾಮಾಜಿಕ ಕ್ಷೇತ್ರ, ವಸತಿ ಕ್ಷೇತ್ರ, ಆರೋಗ್ಯ ಮೂಲಭೂತ ಸೌಕರ್ಯ, ಅತೀ ಸಣ್ಣ ಉದ್ದಿಮೆಗಳು, ಇತ್ಯಾದಿಗಳಂತಹ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ವೇಗವನ್ನು ವೃದ್ಧಿಸಲು ಈ ಯೋಜನೆಗಳನ್ನು ಪರಿಚಯಿಸಲಾಗಿದೆ.

- ಅಮೃತ ಗ್ರಾಮ ಪಂಚಾಯಿತಿ ಯೋಜನೆ
- ಅಮೃತ ರೈತ ಉತ್ಪಾದಕ ಸಂಸ್ಥೆಗಳ ಯೋಜನೆ
- ಅಮೃತ ಗ್ರಾಮೀಣ ವಸತಿ ಯೋಜನೆ
- ಅಮೃತ ಶಾಲಾ ಮೂಲಭೂತಸೌಕರ್ಯ ಯೋಜನೆ
- ಅಮೃತ ಅಂಗನವಾಡಿ ಕೇಂದ್ರಗಳ ಯೋಜನೆ
- ಅಮೃತ ನಿರ್ಮಲ ನಗರ ಯೋಜನೆ
- ಅಮೃತ ಸ್ವಸಹಾಯ ಅತೀ ಸಣ್ಣ ಉದ್ದಿಮೆಗಳ ಯೋಜನೆ
- ಅಮೃತ ಆರೋಗ್ಯ ಮೂಲಭೂತಸೌಕರ್ಯ ಉನ್ನತೀಕರಣ ಯೋಜನೆ
- ಅಮೃತ ಸಮುದಾಯ ಅಭಿವೃದ್ಧಿ ಯೋಜನೆ
- ಅಮೃತ ಕೌಶಲ್ಯ ತರಬೇತಿ ಯೋಜನೆ
- ಅಮೃತ ಕ್ರೀಡಾದತ್ತು ಯೋಜನೆ
- ಅಮೃತ ನಗರೋತ್ಥಾನ ಯೋಜನೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕೋವಿಡ್-19: ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ